ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು ಚಂದ್ರಾ ಬಡಾವಣೆ ಉಪ-ವಿಭಾಗ, ಪಶ್ಚಿಮ, 2ನೇ ಮಹಡಿ

4ನೇ ಬಿ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಎಂ.ಸಿ. ಬಡಾವಣೆ, ಬೆಂಗಳೂರು- 560040.

---

ಸಂಖ್ಯೆ :- ವಾ-127/ವಾ.ಸ/ಸಭಾನಡವಳಿ/06/2020-21 ದಿನಾಂಕ : 06-03-2021

## -: ಸಭೆಯ ನಡವಳಿಗಳು :-

ದಿನಾಂಕ. 06-02-2021 ಶನಿವಾರ ದಂದು ಪೂರ್ವಾಹ್ನ 12-00 ಘಂಟೆಗೆ ವಾರ್ಡ್ - 127 ಮೂಡಲಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎನ್. ಆನಂದ್, ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ - 127 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಾಗೂ ಕೋವಿಡ್- 19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡೆಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ, ಸಭೆಯನ್ನು ಮುನ್ನಡೆಸಲಾಯಿತು.

ಸಭೆಗೆ ಹಾಜರಿದ್ದವರು

| | |
|---|---|
| 1 | ಶ್ರೀ ಎನ್. ಆನಂದ್ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)<br>ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ -127 |
| 2 | ಶ್ರೀ ತಿಮ್ಮಪ್ಪ ಹೆಚ್.ಎಂ ಸಹಾಯಕ ಅಭಿಯಂತರರು<br>ಕಾರ್ಯದರ್ಶಿ ಮತ್ತು ಸಂಚಾಲಕರು |
| 3 | ಸುಮ ಕಿರಿಯ ಅಭಿಯಂತರರು<br>ಬೆಸ್ಕಾಂ |
| 4 | ತಿಪ್ಪೇಸ್ವಾಮಿ & ವಿನು .ಕೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್<br>ಚಂದ್ರಾಲೇಔಟ್ ಪೊಲೀಸ್ ಠಾಣೆ |
| 6 | ಶ್ರೀ ರಮ್ಯ ಕೆ.ಎಸ್ ಹಿರಿಯ ಆರೋಗ್ಯ ಪರಿವೀಕ್ಷಕರು |
| 7 | ಶ್ರೀ ಪ್ರವೀಣ್‌ರಾಜ್ .ಜೆ ಕಿರಿಯ ಆರೋಗ್ಯ ಪರಿವೀಕ್ಷಕರು |
| 8 | ಶ್ರೀ ಜಯರಾಮಯ್ಯ .ಸಿ ಕೆಲಸ ಪರಿವೀಕ್ಷಕರು |
| 9 | ಶ್ರೀ ದೇವರಾಜು ಸೂಪರ್‌ವೈಸರ್ |
| 10 | ಶ್ರೀ ಮನೋಜ್‌ಕುಮಾರ್ .ಎಸ್ ಸಾರ್ವಜನಿಕರು |
| 11 | ಶ್ರೀ ಶಂಕರ್ .ಎನ್ ಸೂಪರ್‌ವೈಸರ್ |

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ**

ಮಾನ್ಯ ಸಭಾಧ್ಯಕ್ಷರಾದ ನೋಡೆಲ್ ಅಧಿಕಾರಿಯವರು ಕೋವಿಡ್- 19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

Scanned with Cam

- ಸಭೆಯಲ್ಲಿ ಕೋವಿಡ್- 19 ಸಾಂಕ್ರಮಿಕ ರೋಗವು ವಾರ್ಡ್‌ನಲ್ಲಿ ದಿನಾಂಕ. 21-12-2020 ರವರೆಗೆ ಒಟ್ಟು 1161 ಕೇಸ್‌ಗಳು ದಾಖಲಾಗಿದ್ದು, ಇವರಲ್ಲಿ 42 ಜನ ಸೋಂಕಿತರಿದ್ದು, 44 ಜನ ಮರಣ ಹೊಂದಿರುತ್ತಾರೆ ಹಾಗೂ 1075 ಜನರು ಗುಣಮುಖರಾಗಿರುತ್ತಾರೆ.

  ಕೋವಿಡ್- 19 ಸಾಂಕ್ರಮಿಕ ರೋಗವು ಉಲ್ಬಣಗೊಳ್ಳುವುದು ವೈದ್ಯಕೀಯ ಸಮೀಕ್ಷೆಯ ಪ್ರಕಾರ ಕಡಿಮೆಯಾಗಿರುವುದರಿಂದ ಆಂಬ್ಯುಲೆನ್ಸ್ ವಾಹನವನ್ನು ಹಾಗೂ ಸಿಬ್ಬಂದಿಯನ್ನು ಸ್ಥಗಿತಗೊಳಿಸುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು.

2) ಅಭಿಯಂತರರ ವಿಭಾಗದ ಬಗ್ಗೆ

ಮಾನ್ಯ ಸಭಾಧ್ಯಕ್ಷರಾದ ನೋಡಲ್ ಅಧಿಕಾರಿಯವರು ವಾರ್ಡ್ – 127 ಅಭಿಯಂತರ ವಿಭಾಗದ ಬಗ್ಗೆ ಮಾತನಾಡುತ್ತಾ ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

- ರಸ್ತೆಗುಂಡಿಗಳನ್ನು ಮುಚ್ಚಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
- ಸಹಾಯ 2.0 ಅಪ್ಲಿಕೇಷನ್‌ನಲ್ಲಿ ದಾಖಲಾಗುತ್ತಿರುವ ದೂರುಗಳಿಗೆ ಶೀಘ್ರವಾಗಿ ಸೂಕ್ತ ಕ್ರಮವಹಿಸಬೇಕಾಗಿ ತಿಳಿಸಿದರು.
- ಮರದಲ್ಲಿ ಓಎಫ್‌ಸಿ ಕೇಬಲ್‌ಗಳು ಹಾದುಹೋಗಿರುವ ದೂರು ಸಹಾಯಕ 2.0 ದಾಖಲಾಗಿದ್ದು, ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. ನಂತರ ಮುಖ್ಯ ಅಭಿಯಂತರರು ಓಎಫ್‌ಸಿ ಸೆಲ್ ರವರಿಗೆ ಮೊಬೈಲ್ ಮೂಲಕ ಸಂಪರ್ಕಿಸಿ ಸಮಸ್ಯೆಗೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ವಿಚಾರಿಸಿದರು.

  ಸಹಾಯಕ ಅಭಿಯಂತರರು ಮಾತನಾಡುತ್ತಾ,
- ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಕಂಡುಬಂದಿರುವಂತಹ ರಸ್ತೆಗುಂಡಿಗಳನ್ನು ಮುಚ್ಚಲಾಗಿದ್ದು, ಇತ್ತೀಚೆಗೆ ಕಂಡುಬಂದಂತಹ ಗುಂಡಿಗಳು ಮಾತ್ರ ಬಾಕಿಯಿರುತ್ತದೆ ವಾರ್ಡ್ ವ್ಯಾಪ್ತಿಯಲ್ಲಿ ಪರಿಶೀಲಿಸಿ ಸಾರ್ವಜನಿಕರ ಅಹವಾಲನ್ನು ಪರಿಶೀಲಿಸಲಾಗಿ ಅಲ್ಲಲ್ಲಿ ಇರುವ ಡೆಬ್ರಿಸ್‌ನ್ನು ಕೂಡಲೇ ತೆರವುಗೊಳಿಸಲು ವಾರ್ಡ್ ಇಂಜನಿಯರ್‌ಗೆ ತಿಳಿಸಲಾಯಿತು ಸಿಲ್ಪ್ & ಟ್ರ್ಯಾಕ್ಟರ್ ವತಿಯಿಂದ ನಿರ್ವಹಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

3) ವಿದ್ಯುತ್ ವಿಭಾಗದ ಬಗ್ಗೆ :-

- ಬೆಸ್ಕಾಂ ವತಿಯಿಂದ ಬೈರವೇಶ್ವರನಗರ ಮತ್ತು ಕಲ್ಯಾಣನಗರ ಸಂಬಂಧಿಸಿದ ಅಭಿಯಂತರರು ಸಭೆಗೆ ಹಾಜರಾಗಿರುತ್ತಾರೆ. ಕಾಮಾಕ್ಷಿಪಾಳ್ಯ ಉಪವಿಭಾಗದಿಂದ ಅಭಿಯಂತರರು ಗೈರುಹಾಜರಾಗಿರುತ್ತಾರೆ. ಪಶುಪಾಲನೆ

4) ಪಶುಪಾಲನೆ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿ ನಾಯಿಗಳ ಹಾವಳಿ ಜಾಸ್ತಿಯಿದ್ದು, ನಾಯಿಕಾಟ ತಪ್ಪಿಸಲು ಹಾಗೂ ಹುಚ್ಚುನಾಯಿಗಳ ಬಗ್ಗೆ ಸಾರ್ವಜನಿಕರು ದೂರನ್ನು ಸಲ್ಲಿಸಿದ್ದರ ಮೇರೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು (ಅನುಪಸ್ಥಿತಿಯಲ್ಲಿ)

5) ತೋಟಗಾರಿಕೆ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿನ ಉದ್ಯಾನವನಗಳ ಪಟ್ಟಿ ಮತ್ತು ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ಬಗೆಗಿನ ಮಾಹಿತಿಗಳನ್ನು ಸಭೆಗೆ ವರದಿ ಮಾಡಲು ತಿಳಿಸಿರುವುದನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

6) ಘನತ್ಯಾಜ್ಯ ವಿಭಾಗದ ಬಗ್ಗೆ :-

- ಹಸಿ ಮತ್ತು ಒಣಕಸ ನಿರ್ವಹಣೆಗೆ ಒತ್ತು ನೀಡಲು ಸಭೆಯಲ್ಲಿ ಸೂಚಿಸಲಾಯಿತು ಕಸ ತೆರವುಗೊಳಿಸುವ ಸ್ಥಳದಲ್ಲಿ ಡೆಬ್ರಿಸ್‌ನ್ನು ತೆರವುಗೊಳಿಸಲು ಸೂಚಿಸಲಾಯಿತು.

7) ಬಿಡಬ್ಲ್ಯೂಎಸ್ಎಸ್‌ಬಿ ವಿಭಾಗದ ಬಗ್ಗೆ:-

ಸಾರ್ವಜನಿಕರಿಗೆ ತೊಂದರೆಯಾಗದಂತೆ, ಮ್ಯಾನ್‌ಹೋಲ್ ಸುತ್ತ ಗುಂಡಿ ಬಿದ್ದಿರುವ ಜಾಗಗಳನ್ನು ಕಾಂಕ್ರೀಟ್‌ನಿಂದ ತುಂಬಿಸಿ ಡೆಬ್ರಿಸ್‌ನ್ನು ತೆರವುಗೊಳಿಸಲು ಸಭೆಯಲ್ಲಿ ಸೂಚಿಸಲಾಯಿತು. ಈ ಬಗ್ಗೆ ಅಭಿಯಂತರರು ಒಪ್ಪಿಗೆ ಸೂಚಿಸಿರುತ್ತಾರೆ. ಶಕ್ತಿಗಾರ್ಡನ್ 3ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೈನ್‌ನ್ನು ಸರಿಪಡಿಸಲು ಸೂಚಿಸಲಾಯಿತು. ಕೊರೆದಿರುವ ಬೋರ್‌ವೆಲ್‌ಗಳನ್ನು ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ನಿರ್ವಹಿಸಲು ಸಭೆಯಲ್ಲಿ ಸೂಚಿಸಲಾಯಿತು. (ಅನುಪಸ್ಥಿತಿಯಲ್ಲಿ)

8) ಬೆಸ್ಕಾಂ ವಿಭಾಗದ ಬಗ್ಗೆ:-

ಕಲ್ಯಾಣನಗರ ಬೈರವೇಶ್ವರನಗರ ಬೆಸ್ಕಾಂ ಅಭಿಯಂತರರು ಸಭೆಗೆ ಹಾಜರಾಗಿರುತ್ತಾರೆ. ಕಾಮಾಕ್ಷಿಪಾಳ್ಯ ಉಪವಿಭಾಗ ಅಭಿಯಂತರರು ಗೈರುಹಾಜರಾಗಿರುತ್ತಾರೆ. ಗಿಡಗಳನ್ನು ಕತ್ತರಿಸಿದ ರೆಂಬೆಗಳನ್ನು ಅಲ್ಲಲ್ಲಿ ಹಾಗೇ ಬಿಟ್ಟಿರುವುದು ಕಂಡುಬಂದಿರುತ್ತದೆ ಇದನ್ನು ತೆರವುಗೊಳಿಸಲು ಸೂಕ್ತ ಕ್ರಮವಹಿಸಲು ಅಭಿಯಂತರರಿಗೆ ಸೂಚನೆ ನೀಡಲಾಯಿತು ಹಾಗೂ ಯುಜಿ ಕೇಬಲ್‌ಗೆ ಅಗೆದಿರುವ ಜಾಗದಲ್ಲಿ ರಸ್ತೆಯನ್ನು ರೆಸ್ಟೋರೇಷನ್ ಕ್ರಮ ವಹಿಸಲು ಸೂಚಿಸಲಾಯಿತು.

9) ಪೊಲೀಸ್ ವಿಭಾಗದ ಬಗ್ಗೆ:-

ಈ ಹಿಂದಿನ ಸಭೆಯಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು ಆದರೆ, ಈ ತಹಲ್‌ವರೆವಿಗೂ ಎಸ್‌ವಿಜಿ ನಗರ, ಬಂಡೆ ಗಣಪತಿ ದೇವಸ್ಥಾನದ ಹತ್ತಿರ, ಕೈಲಾಸಗಿರಿ ಪಾರ್ಕ್ ಹತ್ತಿರ, ಜ್ಞಾನಸೌಧ 8ನೇ ಅಡ್ಡರಸ್ತೆ, ಕಲ್ಯಾಣನಗರ, ಪಂಚಶೀಲನಗರ ಪ್ರದೇಶಗಳಲ್ಲಿ ಗಾಂಜಾ ಹೊಡೆಯುವ ವ್ಯಸನಿಗಳು ಹಾಗೂ ಬೈಕ್ ವೀಲಿಂಗ್ ಮಾಡುವವರು ಮತ್ತು ವಾರ್ಡ್‌ನ ಸೆನ್ಸಿಟಿವ್ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ಸಾರ್ವಜನಿಕರನ್ನು ಅಡ್ಡಗಟ್ಟಿ ಅವರಿಂದ ದಾಬರಿ ಮಾಡುವುದು ಕಂಡುಬಂದಿರುವುದರಿಂದ ರಾತ್ರಿ ವೇಳೆಯಲ್ಲಿ ಹೆಚ್ಚು ಹೊಯ್ಸಳದಲ್ಲಿ ಪರಿವೀಕ್ಷಣೆ ನಡೆಸಬೇಕಾಗಿ ಸಭೆಯಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಿರುವುದನ್ನು ಪೊಲೀಸ್ ವಿಭಾಗದ ಗಮನಕ್ಕೆ ತರಲಾಯಿತು.

10) ಸಮಾಜ ಕಲ್ಯಾಣ ಇಲಾಖೆ ಬಗ್ಗೆ:-

- ಈ ಹಿಂದೆ ಬಜೆಟ್‌ನಲ್ಲಿ ಲಭ್ಯವಿರುವ ಹಿಂದಿನ ಪಾಲಿಕೆ ಸದಸ್ಯರ ಅವಧಿಯಲ್ಲಿ ಸಲ್ಲಿಸಲಾಗಿರುವ ವೈದ್ಯಕೀಯ ಬಿಲ್ಲುಗಳನ್ನು ಪಾವತಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ ಈ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಚರ್ಚಿಸಿರುತ್ತಾರೆ.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಸರಿಪಡಿಸುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಾರ್ಡ್ ಕಮಿಟಿ ವಾರ್ಡ್ – 127 ವಾಟ್ಸ್‌ಅಪ್ ಗ್ರೂಪ್ ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಹಾಯಕ ಅಭಿಯಂತರರು ವಾರ್ಡ್ 127 ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 127

ಅಧ್ಯಕ್ಷರು,
ಹಾಗೂ ಕಾರ್ಯಪಾಲಕ ಅಭಿಯಂತರರು
ನೋಡೆಲ್ ಅಧಿಕಾರಿಗಳು

ಪ್ರತಿಯನ್ನು:-

1) ಮಾನ್ಯ ಮಾನ್ಯ ವಲಯ ವಿಶೇಷ ಆಯುಕ್ತರು (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4) ವೃತ್ತ ಆರಕ್ಷಕ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಪೊಲೀಸ್ ಇಲಾಖೆ, ವಿಜಯನಗರ / ಚಂದ್ರಾಲೇಔಟ್ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5) ವೃತ್ತ ಆರಕ್ಷಕ ನಿರೀಕ್ಷಕರು (ಸಂಚಾರಿ ವಿಭಾಗ) ಪೊಲೀಸ್ ಇಲಾಖೆ, ವಿಜಯನಗರ / ಚಂದ್ರಾಲೇಔಟ್ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೆಸ್ಕಾಂ, ಕಾಮಾಕ್ಷಿಪಾಳ್ಯ / ವಿಜಯನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ವಿಜಯನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

Scanned with Cam

8) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಕೋಶ ಗೋವಿಂದರಾಜನಗರ ವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

9) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೀದಿ ದೀಪ ನಿರ್ವಹಣೆ (ಬಿಬಿಎಂಪಿ ವಿದ್ಯುತ್) ವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

10) ಸಹಾಯಕ ಕಂದಾಯ ಅಧಿಕಾರಿಗಳು (ಚಂದ್ರಾಬಡಾವಣೆ) ಉಪವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

11) ಅಧೀಕ್ಷಕರು ತೋಟಗಾರಿಕೆ ಇಲಾಖೆ (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

12) ಆರೋಗ್ಯ ವೈಧ್ಯಾಧಿಕಾರಿಗಳು (ಗೋವಿಂದರಾಜನಗರ) ವಿಭಾಗರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

13) ವಲಯ ಅರಣ್ಯಾಧಿಕಾರಿ (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

14) ಕಿರಿಯ / ಹಿರಿಯ ಆರೋಗ್ಯ ಪರಿವೀಕ್ಷಕರು ಸದಸ್ಯರುಗಳ ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕೆ

15) ವಾರ್ಡ್ ಪ್ರದೇಶಗಳ ಸ್ಥಳೀಯ ನಾಗರೀಕ ಕಲ್ಯಾಣ ಸಂಘಗಳು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

Scanned with Cam